**ಕರ್ನಾಟಕ ಸರ್ಕಾರ**
**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**
**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಜ ನಿ : ಸುಮಪ : 2020–21** **ದಿನಾಂಕ : 14–08–2020**

**ಪತ್ರಿಕಾ ಆಮಂತ್ರಣ**

1) ಸ್ವಾತಂತ್ರ್ಯೋತ್ಸವ ದಿನಾಚರಣೆ ಸಮಾರಂಭ –2020

ಧ್ವಜಾರೋಹಣೆ

ಬಿ.ಎಸ್. ಯಡಿಯೂರಪ್ಪ

ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ದಿನಾಂಕ: 15–08–2020, ಸಮಯ: ಬೆಳಿಗ್ಗೆ 09–00 ಗಂಟೆಗೆ

ಸ್ಥಳ: ಫೀಲ್ಡ್ ಮಾರ್ಷಲ್ ಮಾಣೇಕ್‌ಷಾ ಪೆರೇಡ್ ಮೈದಾನ, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು

2) Independence Day Celebrations -2020

Flag Hosting by

B.S.Yediyurappa

Chief Minister of Karnataka

Date: 15-08-2020, Saturday Time : 09-00 a.m

Place: Field Marshal Manekshaw Parade Grounds Mahatma Gandhi Road, Bengaluru

**3)** Independence Day Celebration in High Court of Karnataka

Flag Hosting by

Justice Abhay Shreeniwas Oka

Chief Justice, High Court of Karnataka

Date: 15-08-2020, Saturday Time : 09-30 a.m

Place: Cental Portico of the High Court facing Cubbon Park,

## ಪತ್ರಿಕಾ ಪ್ರಕಟಣೆ

### ನಾಡಿನ ಜನತೆಗೆ ರಾಜ್ಯಪಾಲರಿಂದ ಸ್ವಾತಂತ್ರ್ಯೋತ್ಸವದ ಶುಭಾಶಯ

ಬೆಂಗಳೂರು, ಆಗಸ್ಟ್ 14 (ಕರ್ನಾಟಕ ವಾರ್ತೆ)

74ನೇ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಕರ್ನಾಟಕದ ಜನರಿಗೆ ರಾಜ್ಯಪಾಲರಾದ ವಜುಭಾಯಿ ವಾಲಾ ಅವರು ಶುಭಾಶಯಗಳನ್ನು ಕೋರಿದ್ದಾರೆ.

ಈ ಐತಿಹಾಸಿಕ ದಿನದಂದು ನಮ್ಮ ದೇಶದ ನಿರ್ಮಾತೃಗಳಿಗೆ ಶ್ರೇಷ್ಠ ಗೌರವ ಸಲ್ಲಿಸುವಲ್ಲಿ ನಿಮ್ಮೆಲ್ಲರ ಜೊತೆಗಿರುತ್ತೇನೆ. ನಮ್ಮ ತಾಯಿನಾಡಿನ ಎಲ್ಲಾ ಧೀರ ಪುತ್ರರು ಮತ್ತು ವೀರ ವನಿತೆಯರು ಹಾಗೂ ಸವಾಲಿನ ಪರಿಸ್ಥಿತಿಯಲ್ಲೂ ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿದ ನಮ್ಮ ಸಶಸ್ತ್ರ ಪಡೆಗಳು, ಅರೆಸೈನಿಕ ಪಡೆ, ಸ್ವಾತಂತ್ರ ಹೋರಾಟಗಾರರು, ರಾಜ್ಯ ಪೊಲೀಸ್ ಮತ್ತು ಎಲ್ಲಾ ಇತರೆ ಸಂಸ್ಥೆಗಳಿಗೆ ನನ್ನ ಮೆಚ್ಚುಗೆ ತಿಳಿಸುತ್ತೇನೆ.

ಈ ಭವ್ಯವಾದ ಆಚರಣೆಯ ಈ ಸಮಯದಲ್ಲಿ ನಾನು ಎಲ್ಲರಿಗೂ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳನ್ನು ತಿಳಿಸುತ್ತಾ, ಈ ಸಂದರ್ಭವು ತಮಗೆ ಸಂತೋಷ ಹಾಗೂ ಸಂಭ್ರಮ ತರಲೆಂದು ರಾಜ್ಯಪಾಲರು ಹಾರೈಸಿದ್ದಾರೆ.

### Independence Day Message by Governor

Bangalore, Aug 14 (Karnataka Information) :

On the joyous occastion 74th Independence Day. Extend my warm greeting to all of you. I also convey good wishes to my beloved people of karntaka.

On this historic day, I join all of you in paying our rich tributes to our founding fathers and all the valiant sons and daughters of our motherland who sacrificed their lives for the freedom of our country and also convey my appreciation to our Armed forces, the Paramilitary Forces, Freedom fighters, State Police and all other organizations who are serving in challenging conditions to ensure security and sanctity of our borders.

Governor once again convey his greetings for Independence Day and wish one and all a happy and grand celebrations of the joyous occasion.

## ವಿಶ್ವೇಶ್ವರ ಹೆಗಡೆ : 74ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು

**ಬೆಂಗಳೂರು, ಆಗಸ್ಟ್ 14 (ಕರ್ನಾಟಕ ವಾರ್ತೆ) :**

74ನೇ ಸ್ವಾತಂತ್ರ್ಯೋತ್ಸವವನ್ನು ನಾಡಿನ ಹಾಗೂ ರಾಷ್ಟ್ರದ ಹೆಮ್ಮೆಯ ಪ್ರಜೆಗಳಾದ ನಾವುಗಳು ಅತ್ಯಂತ ಸಂತಸದಿಂದ "ಕರೋನಾ ಭೀತಿಯ ನಡುವೆಯೇ, ಕರೋನಾ ವಾರಿಯರ್ಸ್‌ಗಳಿಗೆ ಆತ್ಮಸ್ಥೈರ್ಯವನ್ನು ತುಂಬುವಂತೆ ಆಚರಿಸುವುದರ ಜೊತೆಗೆ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಹಿರಿಯರ ತ್ಯಾಗ ಹಾಗೂ ಬಲಿದಾನವನ್ನು ನೆನಪಿಸುತ್ತಾ, ನಾಡಿನ ಎಲ್ಲಾ ಸಮಸ್ತ ಜನತೆಗೆ ಸ್ವಾತಂತ್ರ್ಯೋತ್ಸವದ ಶುಭಾಶಯಗಳನ್ನು ಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ತಿಳಿಸಿದ್ದಾರೆ.

## ಸಚಿವರ ಪ್ರವಾಸ

**ಬೆಂಗಳೂರು, ಆಗಸ್ಟ್ 14 (ಕರ್ನಾಟಕ ವಾರ್ತೆ) :**

ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಕೆ. ಗೋಪಾಲಯ್ಯ ಅವರು ಆಗಸ್ಟ್ 15 ರಂದು ಹಾಸನ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರಸ್ಥಾನಕ್ಕೆ ವಾಪಸಾಗಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಸಚಿವರ ಪ್ರವಾಸ

**ಬೆಂಗಳೂರು, ಆಗಸ್ಟ್ 14 (ಕರ್ನಾಟಕ ವಾರ್ತೆ) :**

ಕಂದಾಯ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವ ಆರ್. ಅಶೋಕ ಅವರು ಆಗಸ್ಟ್ 15 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರಸ್ಥಾನಕ್ಕೆ ವಾಪಸಾಗಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಪ್ರಾಣಿಗಳ ದತ್ತು ಸ್ವೀಕಾರ

ಬೆಂಗಳೂರು, ಆಗಸ್ಟ್ 14 (ಕರ್ನಾಟಕ ವಾರ್ತೆ) :

ಮೈಸೂರು ಶ್ರೀ ಚಾಮರಾಜೇಂದ್ರ ಮೃಗಾಲಯದಿಂದ ಕೃಷ್ಣ ಮೃಗ, ರೆಡ್‌ಬಿಲ್ಡ್, ಟೌಕಾನ್, ಮ್ಯಾಂಡರೀನ್ ಡಕ್, ಎರಡು ನಕ್ಷತ್ರ ಆಮೆ, ಎರಡು ಲವ್ ಬರ್ಡ್ ಮತ್ತು ಚುಕ್ಕೆ ಜಿಂಕೆ ಪ್ರಾಣಿ ಪಕ್ಷಿಗಳನ್ನು ಮೃಗಾಲಯವು ನಿಗಧಿಪಡಿಸಿರುವ ಶುಲ್ಕವನ್ನು ಪಾವತಿಸಿ ದತ್ತು ಸ್ವೀಕರಿಸಿರುವ ಬೆಂಗಳೂರಿನ ರಾಧಿಕ ವೇಣುಗೋಪಾಲ್, ಕು.ಅನರ್ಘ್ಯ, ಕು.ವರ್ಷಿಣಿ, ಮೈಸೂರಿನ ಕು. ಪ್ರೇಮ ಸ್ವರೂಪ ಹಾಗೂ ಕೋಲಾರದ ಕಮಲ್ ಕುಮಾರ್ ಜಿ.ಇವರನ್ನು ಮೈಸೂರು ಮೃಗಾಲಯವು ಅಭಿನಂದಿಸಿದೆ.

## Central Defence Minister launches products indigenously developed by BEL

Bengaluru,August 14 (Karnataka Information):

Central Defence Minister Rajnath Singhji, on Thursday, August 13, 2020, launched through Video Conference two products — Linear Variable Differential Transducer (LVDT) and 1kW Transmitter Aerial Switching Rack, indigenously developed for use in various strategic applications, as part of the Government of India's Atmanirbhar Bharat initiative.

Gowtama M V, Chairman & Managing Director, Bharat Electronics Limited (BEL), on the occasion, gave a presentation to the minister on these products, which have been indigenously developed by BEL.

Linear Variable Differential Transducer (LVDT) is a Motion Sensing and Feedback Control device, which has been developed primarily for supply to DRDO labs Gas Turbine Research Establishment (GTRE) and Research Centre Imarat (RCI). Due to its high accuracy of functional parameters, LVDT finds applications in Aerospace, Missiles, Solar, Aircraft Engines, Wind energy and Naval systems, and works in adverse climatic conditions. LVDT has been designed and developed for customised retrofit requirement. The development of this product is a huge step

for India towards self-reliance and is an import substitute saving the Country Foreign Exchange (FE) to the tune of Rs. 100 Crores over the next two to three years' time.

The 1kW Transmitter Aerial Switching Rack (ASR) has been designed completely in-house by BEL, to be supplied as part of the Advanced Composite Communication System (ACCS) onboard Indian Naval ships. The configuration caters for switching four numbers of High Frequency (HF) Transmitters to four numbers of HF Antenna with Antenna Tuning Unit (ATU) in any combination. This enables users to switch any radio to any of the Antenna for redundancy. The system can be remotely controlled in the IP based Network.

The ASR is an import substitution for the HF Aerial switching Unit from USA and is likely to bring in FE savings of about Rs. 30 lakhs per unit.

**Photo attached**

## ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್‌ಗೆ ಸದಸ್ಯರಾಗಿ ಮೈಲಾರಪ್ಪ ನೇಮಕ

ಬೆಂಗಳೂರು, ಆಗಸ್ಟ್ 14 (ಕರ್ನಾಟಕ ವಾರ್ತೆ)

ಬೆಂಗಳೂರು ವಿಶ್ವವಿದ್ಯಾಲಯ ಸಮಾಜ ಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಬಿ.ಸಿ. ಮೈಲಾರಪ್ಪ ಅವರನ್ನು ಮುಂದಿನ ಒಂದು ವರ್ಷದ ಅವಧಿಯವರೆಗೆ ವಿಶ್ವವಿದ್ಯಾಲಯದ ಸಿಂಡಿಕೇಟ್‌ಗೆ ಸದಸ್ಯರನ್ನಾಗಿ ನಾಮನಿರ್ದೇಶನ ನೇಮಕಮಾಡಲಾಗಿದೆ ಎಂದು ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## Mylarappa appointed as Syndicate member

Bengaluru,August 14 (Karnataka Information):

B C Mylarappa, Professor, Department of Sociology, Bangalore University, is appointed as a Syndicate member says Registrar Bangalore University

## President's Police Medal for Distinguished Service and Police Medal for Meritorious service announced

Bengaluru,August 14 (Karnataka Information):

The following Police officers / Men of Karnataka State have been conferred with President's Police Medal for Distinguished Service and Police Medal for Meritorious Service by the President of India on the occasion of Independence Day - 2020.

DISTINGUISHED SERVICE

| Sl. No | Name of the Officer | Place of Working |
|---|---|---|
| 1. | Sri V.L.N. Prasanna Kumar, | ASI, C.I.D. Bengaluru |

MERITORIOUS SERVICE

| Sl.No | Name of the Officer & Designation | Place of Working |
|---|---|---|
| 1. | Sri R. Hemanth Kumar | Dy.SP, SIT KLA, Bengaluru |
| 2. | Sri Parameshwar Hegde | Dy.SP, C.I.D, Bengaluru |
| 3. | Sri R. Manjunath | Dy.SP, ACB, Mandya |
| 4. | Sri H. M. Shailendra | Dy.SP, Somawarpet Sub-dvn. Kodagu |
| 5. | Sri Arun Nagegowda | Dy.SP, S.R.Patna Sub-dvn. Mandya |
| 6. | Sri H. M. Satish | ACP, Traffic North, Bengaluru City |
| 7. | Sri H. B. Ramesh Kumar | Dy.SP, State Int, Bengaluru |
| 8. | Sri P. Umesh | Dy.SP, (Armed), PTS, Mysuru. |
| 9. | Sri C. N. Diwakar | CPI, Madikeri Rural PS. Kodagu Dist |
| 10. | Sri G.N. Rudresh | Spl. RPI, 3$^{rd}$ Bn KSRP, Bengaluru |
| 11. | Sri B. A. Lakshminarayan | PSI, CSB, Bengaluru |
| 12. | Sri M.H. Chandekar | Spl. RSI, 3$^{rd}$ Bn, KSRP, Bengaluru |
| 13. | Sri K. Jayaprakash | PSI, Wireless, Mangaluru |
| 14. | Sri H. Nanjundaiah | ASI, DCRB, Chikkaballapura Dist. |
| 15. | Sri Atheeq Ur Rahman | ASI, Agumbe PS, Shivamogga Dist |

| | | |
|---|---|---|
| 16. | Sri Ramanjanaiah | ASI, K.B.Cross PS, Tumakur Dist |
| 17. | Sri R. N. Balikai | ASI, Ranebennur Rural PS. Haveri Dist. |
| 18. | Sri K. Honnappa | CHC-718, DSB DPO, Bengaluru |

Office of the Director General and Inspector General of Police,Karnataka State

# ಕನ್ನಡದ ಹೊಸ ಆವಿಷ್ಕಾರಗಳು ಹೆಚ್ಚಬೇಕು: ಟಿ.ಎಸ್.ನಾಗಾಭರಣ

**ಬೆಂಗಳೂರು, ಆಗಸ್ಟ್ 14 (ಕರ್ನಾಟಕ ವಾರ್ತೆ) :**

ಕನ್ನಡದ ತಂತ್ರಜ್ಞಾನ ಬೆಳವಣಿಗೆಗೆ ಪೂರಕವಾಗುವ ನಿಟ್ಟಿನಲ್ಲಿ ಕ-ನಾದ ಸಂಸ್ಥೆಯು ಕನ್ನಡದ ಕೀಲಿಮಣೆಯೊಂದನ್ನು ಆವಿಷ್ಕರಿಸಿರುವುದು ಅತ್ಯಂತ ಶ್ಲಾಘನೀಯವಾದುದು ಎಂದು **ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಟಿ.ಎಸ್.ನಾಗಾಭರಣ ಅವರು ಬಣ್ಣಿಸಿದರು.**

ಕ-ನಾದ ಸಂಸ್ಥೆಯು ನೂತನವಾಗಿ ಆವಿಷ್ಕರಿಸಿರುವ ಕನ್ನಡದ ಯೂನಿಕೋಡ್ ಕೀಲಿಮಣೆಯನ್ನು ವಿಧಾನಸೌಧದ ೨ನೇ ಮಹಡಿಯಲ್ಲಿರುವ ತಮ್ಮ ಕಛೇರಿಯಲ್ಲಿ ಸರಳ ಕಾರ್ಯಕ್ರಮದಲ್ಲಿ ಇಂದು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಕನ್ನಡಕ್ಕೆ ಇಂತಹ ಹೊಸ ಹೊಸ ಆವಿಷ್ಕಾರಗಳು ಹೆಚ್ಚೆಚ್ಚು ಆಗಬೇಕಿದೆ. ಆ ಮೂಲಕ ಕನ್ನಡವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವ ಅಗತ್ಯತೆ ಇದೆ ಎಂದು ಅಭಿಪ್ರಾಯಪಟ್ಟರು.

ಎಲ್ಲರೂ ಇದೂವರೆವಿಗೂ ಇಂಗ್ಲಿಷ್ ಕಿಲಿಮಣೆಯಲ್ಲಿ ಕನ್ನಡವನ್ನು ಟಂಕಿಸಲಾಗುತ್ತಿದೆ. (ಟಂಕಿಸುವುದು, ಒತ್ತುವುದು, ಬಳಸುವುದು, ಸೃಜಿಸುವುದು) ಆದರೆ ಕ-ನಾದ ಸಂಸ್ಥೆಯ ಗುರುಪ್ರಸಾದ್ ಮತ್ತವರ ತಂಡವು ಹೊಸದಾಗಿ ಕನ್ನಡದ ಕೀಲಿಮಣೆಯನ್ನು ರೂಪಿಸಿದ್ದಾರೆ. ಇದರ ಪ್ರಯೋಜನವು ಎಲ್ಲ ಸರ್ಕಾರಿ ಕಛೇರಿಗಳು, ಸಂಘ-ಸಂಸ್ಥೆಗಳು ಪಡೆಯುವಂತಾಗಲಿ ಎಂದು ಹಾರೈಸಿದರು.

**ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಕೆ.ಮುರಳಿಧರ ಅವರು ಮಾತನಾಡಿ,** ಕನ್ನಡ ಭಾಷೆಯಲ್ಲಿ ಶಿಕ್ಷಣ ಅಭಿವೃದ್ಧಿಯತ್ತ ಸಾಗಲು ಇಂತಹ ಅನ್ವೇಷಣೆಗಳು ಇನ್ನೂ ಹೆಚ್ಚು ನಡೆಯಬೇಕಿದೆ. ಕನ್ನಡಿಗರ ಅನ್ವೇಷಣೆಯಾದ ಕ-ನಾದ ಕೀಲಿಮಣೆ ಆವಿಷ್ಕಾರವು ಕನ್ನಡ ಹಾಗೂ ಭಾರತೀಯ ಭಾಷಾ ಕಲಿಕೆಗೆ ಒಂದು ವಿಶೇಷ ಉಪಕರಣವಾಗಿದೆ. ಈ ಕೀಲಿಮಣೆಯಲ್ಲಿ ಕನ್ನಡವನ್ನು ಸುಲಭವಾಗಿ ಮತ್ತು

ವೇಗವಾಗಿ ಬಳಸಬಹುದಾಗಿದೆ. ಇದು ಕನ್ನಡ ಹಾಗೂ ಭಾರತೀಯ ಭಾಷಾ ಕಲಿಕೆಗೆ ಒಂದು ವಿಶೇಷ ಉಪಕರಣವಾಗಲಿದೆ ಎಂದು ತಿಳಿಸಿದರು.

**ಕ-ನಾದ ಸಂಸ್ಥೆಯ ಸಂಸ್ಥಾಪಕರಾದ ಗುರುಪ್ರಸಾದ್ ಅವರು ಮಾತನಾಡಿ,** ಕನ್ನಡದ ನೂತಲ ಕೀಲಿಮಣೆಯು ಪ್ರಾಧಿಕಾರದ ಅಧ್ಯಕ್ಷರಿಂದ ಅಧಿಕೃತವಾಗಿ ಬಿಡುಗಡೆಗೊಂಡಿದ್ದು ಸಂತಸದ ವಿಷಯವಾಗಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕನ್ನಡ, ಕನ್ನಡಿಗ, ಕನ್ನಡ ಸಾಹಿತ್ಯ ಪರವಾದ ಸಾಕಷ್ಟು ಕೆಲಸಗಳನ್ನು ನಿರ್ವಹಿಸುತ್ತಿದೆ. ಈ ಕ-ನಾದ ನೂತನವಾಗಿ ರೂಪಿಸಿರುವ ಕನ್ನಡ ಕೀಲಿಮಣೆಯು ಆಂಗ್ಲ ಕೀಲಿಮಣೆಗಿಂತ ಶೇ.೩೦ರಷ್ಟು ವೇಗವಾಗಿ ಬಳಸಬಹುದಾಗಿದೆ, ಕರ್ನಾಟಕದ ಎಲ್ಲ ಕಛೇರಿ, ಶಾಲೆಗಳಲ್ಲಿ ಕನ್ನಡ ಕಲಿಕೆಗೆ ಉಪಯುಕ್ತ ಸಾಧನವಾಗಿದೆ, ಶಾಲೆಗಳಲ್ಲಿ ಆಂಕಿಕ ವಿದ್ಯುನ್ಮಾನ ಗಣಕಯಂತ್ರ ಕನ್ನಡ ಸಾಕ್ಷರತೆಗೆ ಉತ್ತಮ ಉಪಕರಣವಾಗಲಿದೆ, ಕನ್ನಡ ಭಾಷಾ ಕಲಿಕಾ ತರಬೇತಿಗೆ ಎಲ್ಲ ಭಾರತೀಯ ಭಾಷೆಯ ಬಳಕೆಗೆ ಉತ್ತಮ ಸಾಧನವಾಗಲಿದೆ, ಶಾಲೆಗಳಿಗೆ ಸೂಕ್ತವಾದ ಸಣ್ಣ ಗಾತ್ರದ ಗಣಕಯಂತ್ರ ಜೋಡಣೆಯ ಯೋಜನೆಯಾಗಿದೆ, ಅಲ್ಲದೆ ದ್ವಿಭಾಷಾ ವಿನ್ಯಾಸದಿಂದ ಆಂಗ್ಲಭಾಷೆಯನ್ನು ಸುಲಭವಾಗಿ ಕಲಿಯಬಹುದಾಗಿದೆ ಎಂದು ಪ್ರಾತ್ಯಕ್ಷಿಕೆಯ ಮೂಲಕ ವಿವರಿಸಿದರು.

ಒಂದು ಕನ್ನಡದ ಕೀಲಿಮಣೆ, ಸಣ್ಣದೊಂದು ಲ್ಯಾಪ್ ಟಾಪ್ ನ್ನು ಕೇವಲ ೧೨,೦೦೦ ರೂಗಳಿಗೆ ಈ ಹೊಸ ಮಾದರಿ ಲ್ಯಾಪ್ ಟಾಪ್ ಕ-ನಾದ ಸಂಸ್ಥೆಯಿಂದ ದೊರೆಯಲಿದೆ. ಅಸಕ್ತರು ಕ-ನಾದ ಸಂಸ್ಥೆಯನ್ನು ಸಂಪರ್ಕಿಸಬಹುದಾಗಿದೆ ಎಂದರು.

ಈ ಲ್ಯಾಪ್ ಟಾಪ್ ಅನ್ನು ಮೊಬೈಲ್ ಗೆ ಬಳಸಬಹುದಾದ ಫವರ್ ಬ್ಯಾಂಕಿನಿಂದಲೂ ಚಾಲೂ ಮಾಡಬಹುದಾಗಿದ್ದು ವಿದ್ಯುತ್ ಸಮಸ್ಯೆ ಎದುರಿಸುವ ಗ್ರಾಮೀಣ ವಿದ್ಯಾರ್ಥಿಗಳಿಗೆ ವರದಾನವಾಗಲಿದೆ. ಅಲ್ಲದೆ ನೂತನವಾಗಿ ರೂಪಿಸಲಾಗಿರುವ ಕನ್ನಡದ ಕೀಲಿಮಣೆ (ಕೀಬೋರ್ಡ್)ಯಿಂದ ಇಂಗ್ಲಿಷನ್ನು ಸಹ ಸುಲಭವಾಗಿ ಕಲಿಯಬಹುದಾಗಿದೆ. ಈ ಕುರಿತು ಶಿಕ್ಷಣ ಸಚಿವರಿಗೂ ವಿವರಿಸುವುದಾಗಿ ತಿಳಿಸಿದರು.

ಕ-ನಾದ ಸಂಸ್ಥೆಯ ಸಂಸ್ಥಾಪಕರಾದ ವಿಶ್ವನಾಥ, ನಿರ್ದೇಶಕರಾದ ಗೋಪಾಲ್ ಅಯ್ಯಂಗಾರ್, ಲಿಪಿತಜ್ಞರಾದ ಡಾ.ಬಿವಿಕೆ ಶಾಸ್ತ್ರಿ, ಶೆರಿನ್, ಬೆರಳಚ್ಚು ತಜ್ಞ ಶ್ರೀ ರೇಣುಕ, ಸತೀಶ್ ಅಗ್ಗಲ ಹಾಗೂ ಸಮೃಧ ಇತರರು ಉಪಸ್ಥಿತರಿದ್ದರು.